“ಹೇ ಬದಿಕಿಬಿಟ್ನಲ್ಲ ಸೂಳೇಮಗ ಅಂತ ಬೈಕಣಾಕ ಹತ್ತೀಯೇನವಾ?”

“ಇಲ್ರೀ ಇಲ್ಲಿ ಬ್ಯಾರೇರಿಗೆಲ್ಲ ಫೋನ್ ಮಾಡಿ ಅಂದ್ರೆಲ್ಲ? ಅವ್ರೆಲ್ಲ ರಾತ್ರಿನೇ ಬಸ್ ಹತ್ತಿದ್ರು...”

“ಹಹಹಹಹ... ತಯೀ ನನ್ ಹ್ಯಣ ಫೋನಿನ್ಯಾಗ ತೋರಿಸಿದ್ರೂ ಬರಾ ಸೂಳೇಮಕ್ಕಳಲ್ಲ ಅವ್ರು... ಸುಮ್ನೆ ಸುದ್ದಿ ಮುಟ್ಟುಸಬಕಲ್ಲ ಅಂತ ಹೇಳಿದೆ ಅಷ್ಟೇ... ಯಾವತ್ತೋ ಒಂದ್ ದಿನಾ ಈ ಸುದ್ದಿ ನಿಜಾ ಆಗೇ ಅಕ್ಕತಿ ಹೌದಿಲ್ಲೋ? ಈಗೇನು ನೀವ್ಯಾರೂ ಮಣ್ಣ್ ಮಾಡಂಗೇ ಇಲ್ಲ... ಆಂಬುಲೆನ್ಸಿಗೆ ಹೇಳಿದ್ರೆ ಅವ್ರೇ ಬಂದು ತಗಂದು ಹೋಗಿ ಕಾಲೇಜಿಗೆ ಹಾಕ್ಯಂತರ! ಆಮ್ಯಾಲ ಎಲ್ರಿಗೂ ನಿಶ್ಚಿಂತಿ.”

ಮೈಪರಚಿಕೊಳ್ಳುವಂತಾಗಿತ್ತು ನನಗೆ. ಈ ಘಟನೆ ನಡೆದು ಐದು ವರ್ಷವಾಗಿದೆ. ಅಜ್ಜಾರು ಈಗಲೂ ಆರಾಮಾಗಿದ್ದಾರೆ ಎನ್ನುವ ವಿಷಯವನ್ನು ನಿಮಗೆ ಹೇಳಲೇಬೇಕು ನಾನು.

ಅಂದಹಾಗೆ ಈ ದೇಹದಾನದ ಹುಕಿ ಹತ್ತುವ ಮುನ್ನ ನನ್ನ ತಂದೆಗೆ ಒಮ್ಮೆ ಮೂತ್ರನಾಳದ ಸೋಂಕು ಉಂಟಾಗಿ ಅವರಿಗೆ ತಾನಿನ್ನು ಬದುಕುವುದಿಲ್ಲ ಎನ್ನಿಸಿತ್ತು. ಸಿಕ್ಕಾಪಟ್ಟೆ ಜ್ವರದಲ್ಲೂ ಬಡಬಡಿಸುತ್ತಿದ್ದರು.

“ಹೂ... ಈಗ ಕರಿಯಣ್ಣಗ ಫೋನ್ ಮಾಡು... ಅವಂದೊಂದು ಗಾಡಿ... ನಮ್ಮದೊಂದು... ಇನ್ನೊಂದು ಬಾಡಿಗಿ ಗಾಡಿ ಮಾಡ್ರಿ...”

“ಯಾಕ?”

“ಒಂದು ಗಾಡಿಯಾಗ ಬಾಡಿ ಹೋಗಲಿ... ಇನ್ನೆರಡು ಗಾಡಿಯಾಗ ಇನ್ನೆಲ್ಲರೂ ಹೋಗಬಕು... ಎರಡು ಗಾಡಿ ಬೇಕಾಕ್ಕವ... ಸ್ಲೊ ಆಗಿ ಹೋಗ್ರಿ... ಏನೂ ಅರಜೆಂಟಿಲ್ಲ...”

“ಯಾವ ಗಾಡಿ? ಯಾವ ಬಾಡೀ?”

“ನಂದು ಮುಗೀತಮ್ಮ... ಇನ್ನ್ ಸ್ವಲ್ಪ ಹೊತ್ತಿಗೆ ಹೋಕ್ಕನಿ ನಾನು... ಆಮ್ಯಾಲ ನಿನಿಗೆ ಅರೇಂಜ್ ಮಾಡಾಕ ಟೈಮಾಗಲ್ಲ... ತಲಿ ಓಡಲ್ಲ...”

ಬೇರೆ ಮನೆಗಳಲ್ಲಿ ಇದು ಸೆಂಟಿಮೆಂಟಲ್ ಸೀನು ಇರಬಹುದು. ಆದರೆ ನಮ್ಮ ಮನೆಯಲ್ಲಿ ಇದು ಬರೀ ಮೆಂಟಲ್ ಸೀನು.

“ಅಪಜಿ... ನೀ ಹೋದ ಮ್ಯಾಲ ನಾ ನೋಡತಿನಿ... ಸುಮ್ನಿರಪ್ಪಜಿ...”

“ಆಮ್ಯಾಲ ಅರ್ಜೆಂಟೀಗೆ ಗಾಡಿ ಸಿಗಲ್ಲಮ...”

“ಸಿಗಲಿಲ್ಲ ಅಂದ್ರೆ ಲಾರಿ ಬುಕ್ ಮಾಡತನಿ...”

“ಸುಳ್ಳೆ ರೊಕ್ಕ ದಂಡ ಮಾಡತಿ...”

“ಇರಲಿ... ದೊಡ್ಡ ಮೆರವಣಿಗಿ ಮಾಡಸನ... ನೋಡಿದ ಮಂದಿ ವಾ! ನಾಗ್ರಾಜನ ಮಗಳು ಅವ್ರಪ್ಪುನ್ನ ಹ್ಯಂಗ ಕಳಿಸಿದಳು ಅಂತ ಮಾತಾಡಿಕ್ಯಬೇಕು...”

“ಥೋ! ಹೋಗ್ಲಿ ಡಾಕ್ಟ್ರುನ್ನ ಕರಿಯಮ...”

ಆಮೇಲೆ ಹುಷಾರಾದರು ಅಂತ ಬೇರೆ ಹೇಳಬೇಕಿಲ್ಲ ತಾನೆ? ಅದಾದ ಮೇಲೇ ದೇಹದಾನದ ನಿರ್ಧಾರ ಮಾಡಿದ್ದು ನಮ್ಮಪ್ಪ! ಈಗಲೂ ಮೂರು ಗಾಡಿಯ ಜೋಕು ನಮ್ಮ ಮನೆಯಲ್ಲಿ ಚಾಲ್ತಿಯಲ್ಲಿದೆ.

ಬದುಕಿದಾಗ ಇರುವ ನೆಲದ ಮೋಹ ಸತ್ತಾಗಲೂ ಕಳೆಯುವುದಿಲ್ಲ ಎನ್ನುವುದು ಕೆಲವು ಜನಗಳ ಜೀವನದಿಂದ ತಿಳಿಯುತ್ತದೆ. ತಮ್ಮ ಜನ, ತಮ್ಮ ಹೊಲ, ತಮ್ಮ ಸ್ಮಾರಕ... ಸತ್ತ ಮೇಲೂ ಜನಗಳ ಬಾಯಲ್ಲಿ ಕಥೆಯಾಗಿ ಇರಬೇಕು ಎನ್ನುವ ಹುಕಿ... ಅಬ್ಬಬ್ಬ! ಸಾವೆಂಬ ಮಾಯಾವಿಯೇ! ಬದುಕಿನ ಆಟಕ್ಕಿಂತ ನಿನ್ನ ಆಟ ಬಹಳ ದೊಡ್ಡದು!

ಬೇರೆ ಕುಟುಂಬಗಳಲ್ಲಿ ಅಥವಾ ಮನೆಗಳಲ್ಲಿ ಹೇಗೋ ಗೊತ್ತಿಲ್ಲ. ನಮ್ಮಲ್ಲಿ ಸಾವಿನ ಬಗ್ಗೆ